"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳು ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಡಾ : ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೇ, "ಘನತೆವೆತ್ತ ರಾಜ್ಯಪಾಲರಿಂದ ಪುನರ್ ಪರಿಗಣನೆಗಾಗಿ ಹಿಂತಿರುಗಿಸಲಾದಂತೆ ಹಾಗೂ ವಿಧಾನ ಪರಿಷತ್ತಿನಿಮದ ಎರಡನೆಯ ಬಾರಿಗೆ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿರುವ 2004ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಹಾಗೂ ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"ಘನತೆವೆತ್ತ ರಾಜ್ಯಪಾಲರಿಂದ ಪುನರ್ ಪರಿಗಣನೆಗಾಗಿ ಹಿಂತಿರುಗಿಸಲಾದಂತೆ ಹಾಗೂ ವಿಧಾನ ಪರಿಷತ್ತಿನಿಂದ ಎರಡನೇಯ ಬಾರಿಗೆ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿರುವ 2004ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಹಾಗೂ ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

14. ಪ್ರಕಟಣೆ

ಅಧ್ಯಕ್ಷರು : ಈಗ ಬೆಳಗಾವಿಯಲ್ಲಿ ನಡೆದ ಅಧಿವೇಶನದ ಸಂಕ್ಷಿಪ್ತ ವರದಿಯನ್ನು ಓದುತ್ತಿದ್ದೇನೆ.

ಬೆಳಗಾವಿಯಲ್ಲಿ ಜರುಗಿದ 12 ನೇ ವಿಧಾನ ಸಭೆಯ ನಾಲ್ಕನೇ ಅಧಿವೇಶನದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಹನ್ನೆರಡನೇ ವಿಧಾನಸಭೆಯ ನಾಲ್ಕನೇ ಅಧಿವೇಶನವು ಬೆಂಗಳೂರಿನಿಂದ ಹೊರಗೆ ಪ್ರಪ್ರಥಮವಾಗಿ ಬೆಳಗಾವಿಯಲ್ಲಿ ದಿನಾಂಕ. 25ರಿಂದ 29ನೇ ಸೆಪ್ಟೆಂಬರ್ 2006ರವರೆಗೆ ಒಟ್ಟು 5 ದಿನಗಳಲ್ಲಿ ಸುಮಾರು 32 ಗಂಟೆಗಳ ಕಾಲ ಕಾರ್ಯಕಲಾಪಗಳನ್ನು ನಡೆಸಲಾಗಿದೆ.

ಸದರಿ ಅಧಿವೇಶನದಲ್ಲಿ ಇತ್ತೀಚೆಗೆ ನಿಧನ ಹೊಂದಿದ ಭಾರತ ರತ್ನ ಶ್ರಿ ಉಸ್ತಾದ್ ಬಿಸ್ಮಿಲ್ಲಾ, ಖಾನ್, ಕರ್ನಾಟಕದ ಮಾಜಿ ರಾಜ್ಯಪಾಲರು ಹಾಗೂ ಕೇಂದ್ರದ ಮಾಜಿ ಸಚಿವರಾಗಿದ್ದ ಶ್ರೀ ಭಾನುಪ್ರತಾಪ್ ಸಿಂಗ್, ಮಾಜಿ ಸಚಿವರಾದ ಶ್ರೀ ಜಿ. ಪುಟ್ಟಸ್ವಾಮಿಗೌಡ ಹಾಗು ಶ್ರೀ ಎಲ್. ಜಿ. ಹಾವನೂರ್, ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಂ.ಡಿ. ಶಿವಪುರ, ಶ್ರೀ ಎಸ್.ಎಂ. ಗುರಡ್ಡಿ, ಶ್ರೀ ಸೋಮಲಿಂಗಪ್ಪ, ಹೆಚ್. ನಲವಾಗಲ, ಶ್ರೀ ಗೋವಿಂದರಾವ್ ಮಾನವಿ, ಶ್ರೀ ಬಿ.ಕೆ. ಪುಟ್ಟಯ್ಯ, ಶ್ರೀ ನಡಾಫ್ ಮಹಮದ್ ಸಾಬ್ ಮದರ್ಸಾನ್‌ಸಾಬ್, ಶ್ರೀ ವೆಂಕನಗೌಡ ಪಾಟೀಲ್, ಶ್ರಿ ಆಲಗೌಡ ಬಸಪ್ರಭು ದೇಸಾಯಿ ಹಾಗೂ ರಾಜ್ಯದ ಗಣ್ಯ ವ್ಯಕ್ತಿಗಳಾದ ಶ್ರೀ ಮತಿಘಟ್ಟ ಕೃಷ್ಣಮೂರ್ತಿ, ಶ್ರೀ ಎಸ್.ಕೆ. ಕರೀಂ ಖಾನ್, ಶ್ರೀಮತಿ ಮಹದೇವಿ ತಾಯಿ ಹಾಗೂ ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಮಾಲೆಗಾಂವ್‌ನಲ್ಲಿ ನಡೆದ ಬಾಂಬ್ ಸ್ಫೋಟದಿಂದ ಅಮಾಯಕರು ನಿಧನ ಹೊಂದಿರುವ ಬಗ್ಗೆ ಸದನದಲ್ಲಿ ಸಂತಾಪ ಸೂಚನಾ ನಿರ್ಣಯವನ್ನು ಅಂಗೀಕರಿಸಲಾಗಿದೆ.

ದಿನಾಂಕ :25.9.2006ರಂದು ಗಡಿ ವಿವಾದ ಕುರಿತು ಮಹಾಜನ್ ಆಯೋಗ ನೀಡಿರುವ ವರದಿಯನ್ನು ಯಥಾವತ್ತಾಗಿ ಜಾರಿಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಿತು.

ದಿನಾಂಕ: 26.9.2006 ರಂದು ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು ಮಂಡಿಸಿದ 2006–07ನೇ ಸಾಲಿನ ಪೂರಕ ಅಂದಾಜುಗಳನ್ನು (ಮೊದಲನೇ ಕಂತು) ಅನುಮೋದಿಸಲಾಗಿದೆ.

ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಅನಿರೀಕ್ಷಿತ ಪ್ರವಾಹದಿಂದ ಮತ್ತು ಸಕಾಲದಲ್ಲಿ ಮಳೆಯಾಗದೇ ಉಂಟಾಗಿರುವ ದುಷ್ಪರಿಣಾಮಗಳ ಬಗ್ಗೆ ಪ್ರತ್ಯೇಕವಾದ 2 ನಿಲುವಳಿ ಸೂಚನೆಗಳನ್ನು ಸ್ವೀಕರಿಸಿದ್ದು, ಈ ಎರಡು ಸೂಚನೆಗಳನ್ನು ನಿಯಮ 69ರನ್ನಾಗಿ ಪರಿವರ್ತಿಸಿ ಚರ್ಚೆಗೆ ಅವಕಾಶ ನೀಡಲಾಗಿದೆ ಹಾಗೂ ನಿಯಮ 69ರ ಮೇರೆಗೆ ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಡಾ: ನಂಜುಂಡಪ್ಪ ವರದಿಯಲ್ಲಿನ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಸಂಬಂಧದಲ್ಲಿ ಸೂಚನೆಯನ್ನು ಸ್ವೀಕರಿಸಿ, ಚರ್ಚೆಸಲಾಗಿದೆ.

ಸದನವನ್ನು ಬೆಳಗಾವಿಯಲ್ಲಿ ನಡೆಸುತ್ತಿರುವ ಬಗ್ಗೆ ಹಲವಾರು ಸಂವಿಧಾನಿಕ ವಿರೋಧಿ ಕ್ರಮಗಳನ್ನು ಕೈಗೊಳ್ಳಲಾಗಿದೆಯೆಂದು, ಇದರಿಂದ ಸದನದ ಹಕ್ಕುಚ್ಯುತಿ ಉಂಟಾಗಿದೆ ಎಂದು ಪ್ರಸ್ತಾಪಿಸಲಾದ ಒಂದು ಹಕ್ಕುಚ್ಯುತಿ

ಉಂಟಾಗಿದೆ ಎಂದು ಪ್ರಸ್ತಾಪಿಸಲಾದ ಒಂದು ಹಕ್ಕುಚ್ಯುತಿ ಸೂಚನೆಯ ಕುರಿತು ತೀರ್ಪನ್ನು ನೀಡಿ ತಿರಸ್ಕರಿಸಲಾಯಿತು.

ಈ ಅಧಿವೇಶನದಲ್ಲಿ 59 ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಗಿದೆ.

ಧನವಿನಿಯೋಗ ವಿಧೇಯಕವೂ ಸೇರಿದಂತೆ ಒಟ್ಟು 6 ವಿಧೇಯಕಗಳನ್ನು ಅಂಗೀಕರಿಸಲಾಗಿದ್ದು, ವಿಧೇಯಕಗಳ ಮೇಲಿನ ಚರ್ಚೆಯಲ್ಲಿ ಮಾನ್ಯ ಸದಸ್ಯರುಗಳು ಸಕ್ರಿಯವಾಗಿ ಭಾಗವಹಿಸಿ ಉತ್ತಮ ಸಲಹೆಗಳನ್ನು ನೀಡಿರುತ್ತಾರೆ.

ದಿನಾಂಕ: 28.9.2006 ರಂದು "ಸುವರ್ಣ ಕರ್ನಾಟಕ" ಆಚರಣೆಯ ನಿಮಿತ್ತ ಕರ್ನಾಟಕದ ಘನತೆವೆತ್ತ ರಾಜ್ಯಪಾಲರು ವಿಧಾನಮಂಡಲದ ಉಭಯ ಸದನಗಳ ಸದಸ್ಯರುಗಳನ್ನು ಉದ್ದೇಶಿಸಿ ಸಂದೇಶವನ್ನು ನೀಡಿದರು.

ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿ, ನನ್ನೊಡನೆ ಸಹಕರಿಸಿದ ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಗಳಿಗೆ, ವಿರೋಧ ಪಕ್ಷದ ನಾಯಕರಿಗೆ, ಸಚಿವ ಸಂಪುಟದ ಸದಸ್ಯರುಗಳಿಗೆ, ವಿವಿಧ ಪಕ್ಷಗಳ ನಾಯಕರುಗಳಿಗೆ ಎಲ್ಲಾ ಮಾನ್ಯ ಸದಸ್ಯರುಗಳಿಗೆ, ಈ ಚಾರಿತ್ರಿಕ ಅಧಿವೇಶನವನ್ನು ನಡೆಯಲು ಸುಸಜ್ಜಿತ ವ್ಯವಸ್ಥೆಗಳನ್ನು ಅತ್ಯಂತ ಕಡಿಮೆ ಅವಧಿಯಲ್ಲಿ ಅಭೂತಪೂರ್ವವಾಗಿ ವ್ಯವಸ್ಥೆಗೊಳಿಸಿರುವ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ ಮತ್ತು ಇದೇ ಜಿಲ್ಲೆಯ ಸಮಾಜ ಕಲ್ಯಾಣ ಸಚಿವರಾದ ಶ್ರೀ ಬಾಲಚಂದ್ರ ಜಾರಕಿ ಹೊಳಿ ಅವರಿಗೂ, ಸ್ಥಳಾವಕಾಶ ಮಾಡಿಕೊಟ್ಟು ಎಲ್ಲಾ ರೀತಿಯಲ್ಲೂ ಸಹಕರಿಸಿದ ಕೆಎಲ್ಇ ಸಂಸ್ಥೆಯವರಿಗೆ ಮತ್ತು ಸಂಸ್ಥೆಯ ಅಧ್ಯಕ್ಷರಾದ ಶ್ರೀ ಪ್ರಭಾಕರ ಕೋರೆಯವರಿಗೂ ಹಾಗೂ ಜಿಲ್ಲಾಡಳಿತ ವರ್ಗಕ್ಕೆ ಮತ್ತು ಸದನದ ಕಾರ್ಯಕಲಾಪಗಳನ್ನು ಮಾಧ್ಯಮಗಳಲ್ಲಿ ಪ್ರಸಾರ ಮಾಡಲು ಮತ್ತು ಪತ್ರಿಕೆಗಳಲ್ಲಿ ಪ್ರಕಟಿಸಲು ಸಹಕರಿಸಿದ ಎಲ್ಲಾ ಮಾಧ್ಯಮ ಹಾಗೂ ಪತ್ರಿಕಾ ಪ್ರತಿನಿಧಿಗಳಿಗೆ, ಸರ್ಕಾರದ ವಿವಿಧ ಇಲಾಖಾ ಹಾಗೂ ಕರ್ನಾಟಕ ವಿಧಾನಸಭೆ ಸಚಿವಾಲಯದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಅನುಬಂಧ–I

ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 2005

[2005ರ ವಿಧಾನ ಪರಿಷತ್ತಿನ ವಿಧೇಯಕ ಸಂಖ್ಯೆ 9]

ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ, 1961ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.